"ನಿನಗೇನು ಬೇಕು ಹೇಳು. ನಾನೇ ತರ್ತಿನಿ" ಎನ್ನುತ್ತಾರೆ ಅಪ್ಪ.

"ಬೇಡ, ಬೇಡ ಅಸಲು ನಾವು ಈ ಕಾಲೋನಿಯಲ್ಲಿ ಓಡಾಡುವುದೇ ಸರಿಯಲ್ಲ. ಹೆಸರನ್ನು ಎಷ್ಟೇ ರಹಸ್ಯವಾಗಿಟ್ಟರೂ ಫೋಟೊ ತೋರಿಸದಿದ್ದರೂ ಹಾಸ್ಪಿಟಲ್‌ಗೆ ಹೋಗುವುದು ಬರುವುದು, ಈ ಟೀವಿಗಳ ಸುದ್ದಿಗಳಿಂದಾಗಿ ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಅಷ್ಟೇ ಅಲ್ಲ, ಸುತ್ತಮುತ್ತಲಿನವರಿಗೂ ಗೊತ್ತಾಗಿಬಿಟ್ಟಿದೆ. ಸುದ್ದಿ ಹರಡುತ್ತಲೇ ಇದೆ. ಸ್ವಂತ ಮನೆಯಾದ್ದರಿಂದ ಇಲ್ಲಿರಬೇಕಾಗಿದೆಯೇ ಹೊರತು, ನನಗೆ ಈ ಮನೆಯಲ್ಲಿರಲು ಎಳ್ಳಷ್ಟೂ ಇಷ್ಟವಿಲ್ಲ. ನಿಜಕ್ಕೆ ಮನೆಯನ್ನೇ ಬದಲಿಸಬೇಕಿದೆ" ಅಮ್ಮ ತನ್ನಷ್ಟಕ್ಕೆ ತಾನು ಗೊಣಗುತ್ತಿದ್ದಾಳೆ.

"ಗೊತ್ತಾಗಲಿ ಬಿಡು. ಇದರಲ್ಲಿ ನಮ್ಮ ತಪ್ಪೇನಿದೆ. ಎಷ್ಟೋ ಜನಕ್ಕೆ ಆಕ್ಸಿಡೆಂಟ್ ಆಗುತ್ತಿರುತ್ತೆ ತಾನೆ, ಹಾಗಂತ ಅವರು ಹೊರಗೆ ಹೋಗುವುದಿಲ್ಲವೆ. ನನಗೆ ನಡೆದದ್ದಾದರೂ ಅದೇ ತಾನೆ. ಆಕ್ಸಿಡೆಂಟೇ ತಾನೆ ಅಮ್ಮ. ಮನೆಯನ್ನು ಬದಲಿಸುವುದಾದರೂ ಏಕೆ... ಯಾಕೆ ನಿಮ್ಮೆಲ್ಲರಿಗೂ ಇದು ತುಂಬ ಅಪಮಾನವೆನಿಸುತ್ತಿದೆಯಾ?" ಧ್ವನಿಯಲ್ಲಿ ಕರ್ಕಶತೆ.

"ಅಯ್ಯೋ! ಅಂತಹದ್ದೇನೂ ಇಲ್ಲ. ನೀನು ನೊಂದುಕೊಳ್ಳುತ್ತೀಯೆಂದು" ಅಮ್ಮ ಗಾಬರಿಯಿಂದ ಸರಿಮಾಡಲೆತ್ನಿಸಿದಳು.

ಸಿಟ್ಟಿನಲ್ಲೇ ಹೊರಬಿದ್ದೆ. ನನಗೇ ಗೊತ್ತಿಲ್ಲದ ಬೇಸರ, ಆತಂಕ, ನೋವು, ಸಿಟ್ಟು, ಅಪಮಾನಗಳಿಂದ ಬಹಳ ಹೊತ್ತಿನವರೆಗೂ ಮನೆಗೆ ತಿರುಗಿ ಹೋಗಲಿಲ್ಲ. ಫೋನ್ ಮಾಡಿದರೂ ಎತ್ತಲಿಲ್ಲ. ಅಂದಿನಿಂದ ಅಮ್ಮ ನನ್ನೊಂದಿಗೆ ನೇರವಾಗಿ 'ಎಲ್ಲಿದ್ದೀಯಾ, ಏನ್ಮಾಡ್ತಿದ್ದೀಯಾ' ಎಂದು ಕೇಳುವುದನ್ನು ಬಿಟ್ಟುಬಿಟ್ಟಳು. ಎಲ್ಲಾ ಇನ್‌ಡೈರೆಕ್ಟೇ. ತುಂಬಾ ಮುಖ್ಯವಾದದ್ದೇನೋ ಮಾತನಾಡುವುದಿದೆ ಎನ್ನುವಂತೆ ಕಾಲ್ ಮಾಡುತ್ತಿರುತ್ತಾಳೆ. ಅಷ್ಟೇ ಅಲ್ಲ ಯಾರಾದರೂ ನನ್ನ ಹೆಸರು ಕೇಳಿಸಿಕೊಂಡಾರೆಂದು ತುಂಬಾ ಎಚ್ಚರಿಕೆಯಿಂದ ನನ್ನನ್ನು ನನ್ನ ಹೆಸರಿನಿಂದ ಯಾರೂ ಮನೆಯಲ್ಲಿ ಕರೆಯುವುದೇ ಇಲ್ಲ.

ಫೋನ್ ಇನ್ನೂ ವೈಬ್ರೇಟ್ ಆಗುತ್ತಲೇ ಇದೆ. ಮಾತಾಡದಿದ್ದರೆ ಅಮ್ಮ ಗಾಬರಿಯಾದಾಳೆಂದು ಫೋನೆತ್ತಿಕೊಂಡು "ಹೇಳಮ್ಮಾ" ಎಂದೆ.

"ನೆಯಿಲ್ ಕಟ್ಟರ್ ಎಲ್ಲಿಟ್ಟಿದ್ದೀಯಾ" ಎಂದು ಕೇಳಿದಳು.

"ಈಗ ಯಾಕಮ್ಮ"

"ಉಗುರು ತುಂಬಾ ಬೆಳೆದಿದೆ. ತೆಗೆಯೋಣ ಅಂತ"

"ಮರೆತು ಬಿಟ್ಟೆಯಾ. ಇವತ್ತು ಮಂಗಳವಾರ. ಅಲ್ಲದೆ ದೀಪ ಹಚ್ಚಿ ಬಹಳ ಹೊತ್ತಾಯಿತು. ನಾಳೆ ತಕ್ಕೊಂಡರಾಯ್ತು ಬಿಡು. ಸ್ಟಾರ್‌ಬಕ್ಸ್‌ನಲ್ಲಿಟ್ಟಿದ್ದೇನೆ. ಬಂದೆ" ಎಂದೆ.

ನೆಲದ ಮೇಲೆ ನುಗ್ಗಿಮುಳ್ಳು ಹರಡಿದಂತೆ ಆ ಕಡೆ ನಿಶ್ಶಬ್ದ. ಕಳೆದ ಆರು ತಿಂಗಳಲ್ಲಿ ನಿಶ್ಶಬ್ದ, ಹೀಗೆ ಗಲಿಬಿಲಿಗೊಳ್ಳುವುದು ಅಭ್ಯಾಸವಾಗಿ ಬಿಟ್ಟಿದೆ.

ಆ ನೆಯಿಲ್ ಕಟ್ಟರ್ ಎಲ್ಲಿದೆಯೋ ಹೇಳಿ ಸುಮ್ಮನಾಗಬಹುದು. ಆದರೆ, ಮನೆಯವರು ನನ್ನೊಂದಿಗೆ ಸಹಜವಾಗಿ ಮಾತಾಡಬೇಕೆಂದು, ನಿಮ್ಮ ಫೋನಿನ ಕಾರಣ ಅರ್ಥವಾಯಿತೆಂದು, ನೀವು ನನ್ನೊಂದಿಗೆ ಈ ಹಿಂದಿನಂತೆ ಸಹಜವಾಗಿಲ್ಲವೆಂದು ಹೇಳಲಿಕ್ಕಾಗಿಯೇ ಹಾಗೆ ಮಾತನಾಡುತ್ತಿರುತ್ತೇನೆ.

ಒಂದು ಮೂಲೆಯ ಟೇಬಲ್ಲಿಗೆ ಆಕಡೆ ಈಕಡೆ ಕುಳಿತು ಮುಂದಕ್ಕೆ ಬಾಗಿದ್ದ ಆ ಹುಡುಗ ಹುಡುಗಿಯರ ತಲೆಗಳು ಒಂದನ್ನೊಂದು ತಾಕುತ್ತಿದ್ದರೆ ಸುತ್ತಲೂ ಇದ್ದ ಗದ್ದಲಕ್ಕೂ ತಮಗೂ